ಫೆಬ್ರುವರಿ ಕ್ಯಾಲೆಂಡರ್ ತಿರುವಿ ಮಾರ್ಚ್ ಕಂಡಾಗಲೆಲ್ಲ ಯುವರಾಜ್ ಸಿಂಗ್ ನೆನಪಾಗುತ್ತಾರೆ. ಅವರು 2012ರ ಮಾರ್ಚ್‌ನಲ್ಲಿ ಕ್ಯಾನ್ಸರ್ ಬೀಸುದೊಣ್ಣೆಯಿಂದ ಪಾರಾಗಿ ಅಮೆರಿಕೆಯಿಂದ ತವರಿಗೆ ಮರಳಿದ್ದು. ಮೂರು ಸುತ್ತಿನ ಕಿಮೋಥೆರಪಿ ಮುಗಿಸಿಕೊಂಡು, ಕಣ್ಣೊಳಗೆ ಮತ್ತಷ್ಟು ಆಟದ ಪಸೆ ಉಳಿಸಿಕೊಂಡು ಮರಳಿದವರು 'ಯುವಿ'. ಅವರೀಗ ಐಪಿಎಲ್‌ನ ಮೊದಲ ಪಂದ್ಯದಲ್ಲಿ ಆಡಿದ ರೀತಿ ನೋಡಿದರೆ ಆ ದಿನಗಳ ಅವರ ಸಂಕಟ ಕಂಡವರ ಕಣ್ಣಾಲಿಗಳಲ್ಲಿ ನೀರು ಜಮೆಯಾಗದೆ ಇರದು. ಯಾರೇ ಹೋಗಿ 'ಯುವಿ'ಯನ್ನು 'ಇನ್ನೊಂದು ವಿಶ್ವಕಪ್ ಆಡುವ ಆಸೆ ಇದೆಯಾ' ಎಂದು ಕೇಳಿದರೆ, ಅವರು 'ಇಲ್ಲ' ಎನ್ನಲಾರರು. ಆದರೆ, ಅಂಥ ಬಯಕೆ ಅವರಲ್ಲಿ ಕಳೆದ ವಿಶ್ವಕಪ್ ನಡೆದಾಗಲೇ ಮುರುಟಿತ್ತು. ಅದನ್ನು ಅರಿತೇ ಅವರು ರಿಷಭ್ ಪಂತ್ ಆಟವನ್ನು ಬೆರಗಿನಿಂದ ನೋಡಿ, 'ಈ ಹುಡುಗನಿಗೆ ದೊಡ್ಡ ಕ್ರಿಕೆಟ್ ಭವಿಷ್ಯವಿದೆ' ಎಂದು ಶಹಬ್ಬಾಸ್‌ಗಿರಿ ಕೊಟ್ಟಿದ್ದು. 2011ರ ವಿಶ್ವಕಪ್‌ನ 'ಸರಣಿ ಶ್ರೇಷ್ಠ' ಯುವಿ. ಭಾರತ ಕಪ್ ಎತ್ತಿಹಿಡಿದ ಟೂರ್ನಿ ಅದಲ್ಲವೇ?

'ಯುವಿ' ಹೊಡೆತಗಳ ಹಳೆಯ ಕೊಂಡಿ. ರಿಷಭ್ ಈ ಹೊತ್ತಿನ ಕಿಡಿ. ರಿಷಭ್ ಇನಿಂಗ್ಸ್‌ನ ಅಸಾಂಪ್ರದಾಯಿಕ ಹೊಡೆತಗಳು ಹೆಚ್ಚು ರಂಜನೀಯ. ಯುವಿಯ ಲೀಲಾಜಾಲ ಸ್ಟ್ರೈಟ್ ಡ್ರೈವ್ ಗತವೈಭವ.

ಚುಟುಕು ಕ್ರಿಕೆಟ್ ಇಡೀ ಆಟವನ್ನೇ ಚುರುಕಾಗಿಸಿದೆ. ಬಾಗಿಲ ಎದುರು ವಿಶ್ವಕಪ್ ಬಂದು ನಿಂತಿರುವಾಗ ವರಾಂಡದಲ್ಲಿ ಐಪಿಎಲ್ ಆಡಿಕೊಂಡೇ, 'ಬಂದೇ ಇರು' ಎನ್ನುತ್ತಿರುವ ನುರಿತವರು, ಮಾಗಿದವರು ಒಂದು ಕಡೆ. ಕನಸುಕಂಗಳ ಹೊಸ ಹುಡುಗರ ದಂಡು ಇನ್ನೊಂದು ಕಡೆ. ಎರಡೂ ವರ್ಗಗಳನ್ನು ಕಂಡರೆ ಸೋಜಿಗವಾಗುತ್ತದೆ. ಇಷ್ಟಕ್ಕೂ ಐಪಿಎಲ್‌ನಲ್ಲಿ ಚೆನ್ನಾಗಿ ಆಡಿದರೆ ವಿಶ್ವಕಪ್ ಆಯ್ಕೆಗೆ ಪರಿಗಣಿಸುವರೇ ಎಂಬೊಂದು ಪ್ರಶ್ನೆ ಅನೇಕರಲ್ಲಿ ಇದೆ. ಅದಕ್ಕೆ ಮುಖ್ಯ ಕಾರಣ, ಚುಟುಕು ಕ್ರಿಕೆಟ್‌ನ ಜನಪ್ರಿಯತೆ.

'ಇಲ್ಲ... ಐಪಿಎಲ್‌ನಲ್ಲಿ ಚೆನ್ನಾಗಿ ಆಡುವುದಕ್ಕೂ ವಿಶ್ವಕಪ್ ಆಯ್ಕೆಗೂ ಏನೇನೂ ಸಂಬಂಧವಿಲ್ಲ' ಎಂದು ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ವಿರಾಟ್ ಮಾತು ಅಷ್ಟಕ್ಕೇ ನಿಲ್ಲಲಿಲ್ಲ. ಅವರು ಕರ್ನಾಟಕದ ಕೆ.ಎಲ್. ರಾಹುಲ್ ಬಗೆಗೆ ಒಂದಿಷ್ಟು ಒಳ್ಳೆಯ ಅಭಿಪ್ರಾಯವನ್ನೂ ವ್ಯಕ್ತಪಡಿಸಿದರು. ಹಾಗೆ ಮಾಡುವಾಗ ಅವರು ಉದಾಹರಿಸಿದ್ದು, 2017ರ ಐಪಿಎಲ್‌ನಲ್ಲಿ ರಾಹುಲ್ ಆಡಿದ ರೀತಿಯನ್ನು. ಅಂದರೆ, ಚುಟುಕು ಕ್ರಿಕೆಟ್‌ನ ಮರೆಯಲಾಗದ ಕೆಲವು ಇನಿಂಗ್ಸ್‌ಗಳು ಭಾರತದ ನಾಯಕನ ಮನಸ್ಸಿನಲ್ಲೂ ನೆಲೆ ನಿಂತಿವೆಯೆಂದೇ ಅರ್ಥ. ಅವರ ತಲೆಯೊಳಗೆ ಇನ್ನೊಂದು ನಿರೀಕ್ಷೆಯ ಹುಳವನ್ನು ರಿಷಭ್ ಪಂತ್ ಈಗ ಬಿಟ್ಟಿದ್ದಾರೆ. ದೊಡ್ಡ ಗ್ಲೌಸ್ ಹಾಕಿಕೊಂಡು ವಿಕೆಟ್ ಹಿಂದೆ ನಿಲ್ಲಬಲ್ಲ ಅವರಿಗೆ ಮಹೇಂದ್ರ ಸಿಂಗ್ ದೋನಿಯ ಜಾಣತಲೆಯ ಜೊತೆ ಜೊತೆಗೇ, ಅದೇ ಹಳೆಯ ನಾಯಕನ ಗತಕಾಲದ ಜಂಘಾಬಲ ಕಳೆದುಕೊಂಡ ಕಾಲುಗಳೂ ಕಾಣುತ್ತಿರಬಹುದು.

ಈ ಕ್ರಿಕೆಟ್ಟೇ ಹೀಗೆ... ಅಪ್‌ಡೇಟ್ ಆಗುತ್ತಲೇ ಬಂದಿದೆ. ಏಕದಿನ ಪಂದ್ಯಗಳು ಶುರುವಾದಾಗ ಸುನೀಲ್ ಗಾವಸ್ಕರ್‌ಗೆ ಹೊಂದಿಕೊಳ್ಳಲು ಅದೆಷ್ಟೊಂದು ಇನಿಂಗ್ಸ್‌ಗಳು ಬೇಕಾಗಿದ್ದವು. ಅವರೆದುರೇ ಕೃಷ್ಣಮಾಚಾರಿ ಶ್ರೀಕಾಂತ್ ಪಟಪಟನೆ ರನ್ ಗಳಿಸುತ್ತಿದ್ದರು. ರಾಹುಲ್ ದ್ರಾವಿಡ್, ವಿವಿಎಸ್ ಲಕ್ಷ್ಮಣ್ ಇಬ್ಬರೂ ಸ್ಟೈಲಿಶ್ ಡ್ರೈವ್‌ಗಳಿಂದ ಕ್ರಿಕೆಟ್ ಆಸ್ವಾದಿಸುತ್ತಿದ್ದಾಗಲೇ ವೀರೇಂದ್ರ ಸೆಹ್ವಾಗ್ ಬಂದು ಪಾಯಿಂಟ್ ಫೀಲ್ಡರ್ ತಲೆಯಮೇಲೆ ಹೊಡೆಯತೊಡಗಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಗಳಿಸಿದಾಗಲೂ ಅವರು ತಮ್ಮ

ಕಪ್ ನಮ್ದೇ



'ರಾಜಸ್ಥಾನ್ ರಾಯಲ್ಸ್' ತಂಡದ ನಾಯಕ ಅಜಿಂಕ್ಯ ರಹಾನೆ

